ಟೀ.ನರಸೀಪುರ ಪಟ್ಟಣದಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ.

2095(2729)

ಡಾ: ಭಾರತಿ ಶಂಕರ್(ಟಿ.ನರಸೀಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ನರಸೀಪುರ ಪಟ್ಟಣದಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಇದ್ದರೆ ಎಷ್ಟು ಕಾಲಾವಕಾಶ ಬೇಕು; ಅಂದಾಜು ವೆಚ್ಚ ಎಷ್ಟು?

ಇ) ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು):

ಅ) ಇದೆ.

ಆ) ಕಂದಾಯ ಇಲಾಖೆ ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಕಟ್ಟಡವನ್ನು ನಿರ್ಮಿಸಲು ಕನಿಷ್ಠ ಎರಡು ವರ್ಷಗಳ ಕಾಲಾವಕಾಶ ಬೇಕಾಗುತ್ತದೆ. ಈ ಕಾಮಗಾರಿಗೆ ರೂ.80.00 ಲಕ್ಷಗಳ ಅಂದಾಜು ತಯಾರಿಸಲಾಗಿದೆ.

ಇ) ಕಂದಾಯ ಇಲಾಖೆ ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ ಲೋಕೋಪಯೋಗಿ ರಸ್ತೆಗಳ ಕಳಪೆ ದರ್ಜೆಯ ರಿಪೇರಿಯಿಂದ ವಾಹನ ಸಂಚಾರಕ್ಕೆ ತೊಂದರೆ.

2096(2730)

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ(ಸೇಡಂ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ ಲೋಕೋಪಯೋಗಿ ರಸ್ತೆಗಳು ದೊಡ್ಡ ದೊಡ್ಡ ಕೊರಕಲುಗಳು ಬಿದ್ದರೆ, ಕಳಪೆ ದರ್ಜೆಯ ರಿಪೇರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವಾಗ್ದಾರಿ ರಿಬ್ಬನ್‌ಪಲ್ಲಿ ರಸ್ತೆ ಸೇಡಂ ಕ್ಷೇತ್ರದಲ್ಲಿ ಇಲ್ಲಿಯವರೆವಿಗೂ ಡಾಂಬರೀಕರಣ ರಿಪೇರಿ ಮಾಡಿರುವ ಕಿ.ಮೀ ಎಷ್ಟು; ಇದಕ್ಕೆ ಖರ್ಚಾಗಿರುವ ಹಣವೆಷ್ಟು; ಕಿ.ಮೀ. ವಾರು;

ಇ) 3-4 ತಿಂಗಳಿನಿಂದ ಈ ರಸ್ತೆ ರಿಪೇರಿ ಮಂದಗತಿಯಲಿ ನಡೆದು ಕೆಲಸವಾಗಿಲ್ಲವೇಕೆ?

ಈ) ಈ ಕಳಪೆ ದರ್ಜೆ ಕೆಲಸ ಮಾಡಿರುವ ಅಧಿಕಾರಿಗಳ ಮೇಲೆ ಕೈಗೊಳ್ಳುವ ಕ್ರಮವೇನು; ಇದನ್ನು ಸರಿಪಡಿಸಿ ಮತ್ತು ಈ ರಸ್ತೆಯ ಕೆಲಸವನ್ನು ಪೂರ್ತಿ ಮಾಡುವುದು ಎಂದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ರಸ್ತೆಯ ಹಲವೆಡೆ ತಗ್ಗು ಹಾಗೂ ಕೊರಕಲು ಬಿದ್ದ ಪ್ರದೇಶವನ್ನು ಸರಿಯಾದ ಆಕಾರದಲ್ಲಿ ಕಟ್ ಮಾಡಿ, ಸರಿಯಾಗಿ ರಿಪೇರಿ ಮಾಡಲಾಗುತ್ತಿದೆ.

ಆ) ವಾಗ್ದಾರಿ ರಿಬ್ಬನ್‌ಪಲ್ಲಿ ರಸ್ತೆ ಸೇಡಂ ಕ್ಷೇತ್ರದಲ್ಲಿ 49ಕಿ.ಮೀ ಉದ್ದವಿದ್ದು, 1999-2000 ಸಾಲಿನಲ್ಲಿ 18 ಕಿ.ಮೀ ದುರಸ್ತಿ ಮಾಡಿದ್ದು, 4.62 ಲಕ್ಷ ರೂ. ವೆಚ್ಚವಾಗಿದೆ.

ಇ) ರಸ್ತೆಯಲ್ಲಿ ಕೊರಕಲುಗಳು ಬಿದ್ದಿರುವುದರಿಂದ ಅವುಗಳನ್ನು ತುಂಬಿ ರಸ್ತೆಯ ಮೇಲ್ಮೈಗೆ ಸರಿಯಾಗಿ ಹೊಂದುವಂತೆ ದುರಸ್ತಿ ಬೇಕಾಗಿರುವುದರಿಂದ ಹೆಚ್ಚಿಗೆ ಸಮಯ ಹಿಡಿಯುತ್ತದೆ.

ಈ) ಉದ್ಭವಿಸುವುದಿಲ್ಲ.

ಮಳೆಗಾಲಕ್ಕಿಂತ ಪೂರ್ವದಲ್ಲಿ ಕೆಲಸವನ್ನು ಮುಗಿಸಲಾಗುವುದು.

ಪಶುಸಂಗೋಪನಾ ತಳಿ ಫಾರ್ಮಗಳ ಅಭಿವೃದ್ಧಿ.

2097(2694)

ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ(ಧಾರವಾಡ): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ತಳಿ ಫಾರ್ಮಗಳ ಸಂಖ್ಯೆ ಎಷ್ಟು?

ಆ) ಯಾವ ಯಾವ ಫಾರ್ಮಗಳಲ್ಲಿ ಯಾವ ಯಾವ ತರಹದ ತಳಿಗಳಿವೆ;